ಅಂಶವೇ ಎಷ್ಟು ಖುಷಿಕೊಡುತ್ತಿತ್ತು ಎಂದರೆ ನನ್ನನ್ನು ಎಂದೂ ಹೆಸರು ಹಿಡಿದು ಕರೆಯುತ್ತಿರಲಿಲ್ಲ. ಅವರು ನನ್ನನ್ನು ಕರೆಯುತ್ತಿದ್ದುದು ಕವಿ ಅಂತಲೇ. ವೇದ ಎಂಬ ಹೆಸರು ಅವರ ಬಾಯಲ್ಲಿ ಬಂದಿದ್ದು ಬಹಳ ವಿರಳ. ನನಗೆ ಆವಾಗ ಒಂದು ಕಡೆ ಖುಷಿ ಇನ್ನೊಂದು ಕಡೆ ತುಂಬಾ ಮುಜುಗರ ಆಗುತ್ತಿತ್ತು. ನಮ್ಮ ಸುತ್ತಮುತ್ತ ಜನರಿದ್ದರೂ ಅಪ್ಪ ಅದಾವುದನ್ನೂ ಗಮನಿಸದಂತೆ ನನ್ನನ್ನು ಹೊಗಳುತ್ತಿದ್ದರು. ಅವರು ಒಳ್ಳೆಯ ಸಾಹಿತ್ಯವನ್ನು ಓದಲು ಎಷ್ಟು ಪ್ರೋತ್ಸಾಹಿಸುತ್ತಿದ್ದರೋ ಅಷ್ಟೇ ಕಾಳಜಿಯಿಂದ ಗುಣಮಟ್ಟ ಇಲ್ಲದ ಸಾಹಿತ್ಯದಿಂದ ದೂರ ಕಾಯ್ದುಕೊಳ್ಳುವಂತೆ ನೋಡಿಕೊಳ್ಳುತ್ತಿದ್ದರು.

ಅಪ್ಪ ತಮ್ಮ ಸ್ನೇಹಿತರ, ಸಹೋದ್ಯೋಗಿಗಳ ಜೊತೆ ಸಾಹಿತ್ಯ ಚರ್ಚೆ ಮಾಡುತ್ತಿದ್ದರು. ಅವರು ಯಾರಾದರೂ ಒಳ್ಳೆಯ ಪುಸ್ತಕಗಳು, ಉತ್ತಮ ಇಂಗ್ಲಿಷ್ ಭಾಷೆಯ ಪುಸ್ತಕಗಳನ್ನ ಓದಲು ಸಲಹೆ ಮಾಡಿದರೆ ಅವೆಲ್ಲವೂ ನಮಗೆ ದೊರೆಯುತ್ತಿದ್ದವು. ನಮ್ಮನ್ನ ಆಕಾಶವಾಣಿಗೆ ಕರೆದುಕೊಂಡು ಹೋಗುವುದು, ಕವಿತಾ ವಾಚನ ಮಾಡಿಸುವುದು, ನಿಲಯ ನಿರ್ದೇಶಕರಿಗೆ ನನ್ನ ಕವಿತೆಗಳ ಬಗ್ಗೆ ಹೇಳಿ ಕವಿತಾ ವಾಚನಕ್ಕೆ ಅವಕಾಶ ಕೋರಿ ಪತ್ರ ಬರೆಸುವುದು ಇತ್ಯಾದಿ ಬಹಳ ಆಸ್ಥೆಯಿಂದ ಮಾಡುತ್ತಿದ್ದರು. ಅಧಿಕಾರಿಗಳು ಆಗ ನನ್ನಂಥ ಸಣ್ಣವರಿಗೆ ಅವಕಾಶಗಳನ್ನು ಕೊಡುತ್ತಿದ್ದರು ಕೂಡ!

ಆಗ ಬರೆಯುತ್ತೀನಿ ಎಂಬ ಅಸ್ಮಿತೆಯೇ ಒಂದು ಹೆಗ್ಗಳಿಕೆ. ಅದನ್ನ ಉಂಟುಮಾಡಿದ್ದು ಅಪ್ಪ. ಬಹಳ ಒಳ್ಳೆಯ ಸಾಹಿತ್ಯವನ್ನ ಸೃಷ್ಟಿಸುತ್ತೇವೋ ಇಲ್ಲವೋ ಗೊತ್ತಿಲ್ಲ, ಆದರೆ ಒಳ್ಳೆಯ ಸಾಹಿತ್ಯದ ಅಭಿರುಚಿ, ವಿಸ್ತಾರವಾದ ಓದು, ಆಸ್ಥೆಯಿಂದ ಕೆಲಸ ಮತ್ತು ಗುರಿ ಗಟ್ಟಿ ಹಿಡಿದು ನಡೆಯುವುದನ್ನು ಅಪ್ಪ ಕಲಿಸಿದರು. ಇದರ ಫಲವಾಗಿ ನಾನು ಹತ್ತನೇ ತರಗತಿಗೆ ಬರುವ ಹೊತ್ತಿಗೆ ಚಿಕ್ಕಪುಟ್ಟ ಕಾದಂಬರಿಗಳನ್ನು ಬರೆಯಲು ಶುರು ಮಾಡಿಬಿಟ್ಟಿದ್ದೆ.

◆ ನಿಮ್ಮ ಬರವಣಿಗೆಯ ಮೇಲೆ ತೀರಾ ಪ್ರಭಾವ ಬೀರುವ ಸಮಯ ಬಂದಿದ್ದು ಹೇಗೆ? ಆಗಿನ ವಾತಾವರಣ ಹೇಗಿತ್ತು?

ನಾನು ಪದವಿ ತರಗತಿಗೆ ಸೇರಿಕೊಂಡ ಮೇಲೆ ನನ್ನ ಸಾಹಿತ್ಯದ ಮೇಲೆ ತುಂಬಾ ಪ್ರಭಾವ ಬೀರುವಂತಹ ವಾತಾವರಣ ನನಗೆ ಸಿಕ್ಕಿತು. ಅದಕ್ಕೂ ಮೊದಲು ನನ್ನ ಅಪ್ಪ ನಾನು ಎಳೆತನದಲ್ಲಿ ಬರೆದಿದ್ದ ಕವನಗಳನ್ನೆಲ್ಲಾ ಒಟ್ಟುಮಾಡಿ 'ಕಾವ್ಯ ಕೂಸು' ಎನ್ನುವ ಸಂಕಲನವನ್ನು ತಮ್ಮ ಪಿಎಫ್ ದುಡ್ಡಿನಲ್ಲಿ ಒಂದು ಭಾಗ ವ್ಯಯಿಸಿ ಪ್ರಕಟ ಮಾಡಿದ್ದರು. ತುಂಬಾ ಬಾಲಿಶವಾದ ಅಭಿವ್ಯಕ್ತಿಗಳಾಗಿದ್ದವು ಆ ಕವನಗಳು. ಅದು ಕೂಸು ಅಂದರೆ ಕೂಸೇ ಸರಿ. ಅದಕ್ಕೆ ಎಸ್.ವಿ. ಪರಮೇಶ್ವರ ಭಟ್ಟರು ಬಹಳ ಸಹೃದಯತೆಯಿಂದ ಮುನ್ನುಡಿ ಬರೆದು ಕೊಟ್ಟಿದ್ದರು.

ಇನ್ನೊಮ್ಮೆ ಅಪ್ಪ ನನ್ನನ್ನು ದೇವನೂರ ಮಹಾದೇವ ಅವರನ್ನು ಭೇಟಿ ಮಾಡಲು ಕರೆದುಕೊಂಡು ಹೋಗಿದ್ದರು. ಆಗ ನಾನು ಪಿಯುಸಿಯಲ್ಲಿಯೊ ಅಥವಾ ಪದವಿಯಲ್ಲಿಯೊ ಅಭ್ಯಾಸ ಮಾಡುತ್ತಿದ್ದೆ.

ಎಂದಿನಂತೆ ನನ್ನ ಅಭಿಮಾನಿ ಅಪ್ಪ ನನ್ನ ಕೆಲವು ಕವಿತೆಗಳನ್ನು ಅವರ ಮುಂದೆ ಓದುವಂತೆ ಹೇಳಿದರು. ಮಹಾದೇವ ಅವರು ಹೇಳಿದ ಮಾತು ನನಗೆ ಇನ್ನೂ ಚೆನ್ನಾಗಿ ನೆನಪಿದೆ. ಇನ್ನು 'ಕಸುವು' ಬೇಕು ಎಂದಿದ್ದರು. ಬರೀತಾ ಇರಿ ಎಂದು ಕೂಡ ಹೇಳಿದರು. ಈ ಎಲ್ಲ ಒಡನಾಟಗಳಿಂದಾಗಿ ನನ್ನ ಭಾವಲೋಕ ಇನ್ನು ವಿಸ್ತಾರಗೊಳ್ಳುತ್ತಲೇ ಹೋಯಿತು. ನಮ್ಮ ಕಾಲಕ್ಕೆ ಪಾಠ ಮಾಡುವ ಗುರುಗಳ ಸ್ಥಾನದಲ್ಲಿ ಟಿ.ವಿ. ವೆಂಕಟಾಚಲಶಾಸ್ತ್ರಿಗಳು, ಸಿಪಿಕೆ, ಎಚ್.ಎಂ. ಚೆನ್ನಯ್ಯನವರು, ಜಿ.ಎಚ್. ನಾಯಕರು, ರಾಗೌ, ಎಚ್.ಎಸ್. ಹರಿಶಂಕರ್, ಪಂಡಿತಾರಾಧ್ಯ, ಪ್ರಧಾನ ಗುರುದತ್ತ, ಎಚ್. ತಿಪ್ಪೇರುದ್ರಸ್ವಾಮಿ, ಕಾಳೇಗೌಡ ನಾಗವಾರ ಹೀಗೆ ಸಾಹಿತ್ಯ ಲೋಕದ ಮೇರು ಪ್ರತಿಭೆಗಳೆಲ್ಲಾ ನಮ್ಮ ಮಾರ್ಗದರ್ಶನಕ್ಕೆ ಇದ್ದರು. ನಾನು ಪತ್ರಿಕೆಯಲ್ಲಿ ಅಥವಾ ಮ್ಯಾಗಜೀನ್‌ನಲ್ಲಿ ಏನಾದರೂ